# <u>ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿ:11-09-2020 ರಂದು ನಡೆದ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತೆ ಪ್ರಾಧಿಕಾರದ 10ನೇ ಸಭೆಯ ನಡವಳಿಗಳು</u>

**ಸಮಯ:** ಅಪರಾಹ್ನ 2:30 ಘಂಟೆಗೆ

KSWAN Video Conference ಮೂಲಕ ಸಭೆಯನ್ನು ನಡೆಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ಕಳೆದ ಸಭೆಯ ನಿರ್ದೇಶನಗಳಿಗೆ ಕೈಗೊಂಡಿರುವ ಕ್ರಮಗಳ ಕುರಿತು ಮಂಡಿಸಲಾದ ಅನುಸರಣಾ ವರದಿಯನ್ನು ಪರಿಶೀಲಿಸಿ ಅಧ್ಯಕ್ಷರು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿದರು.

1. **ಕ.ರಾ.ರ.ಸು.ಪ್ರಾಧಿಕಾರದಲ್ಲಿ ಖಾಲಿಯಿರುವ ಶಿಕ್ಷಣ ಅಧಿಕಾರಿ ಹುದ್ದೆ**ಗೆ ಅಧಿಕಾರಿಯನ್ನು ನಿಯೋಜಿಸುವ ಬಗ್ಗೆ ಅಧ್ಯಕ್ಷರು ಈಗಾಗಲೇ ಶಿಕ್ಷಣ ಇಲಾಖೆ (ಪ್ರಾಥಮಿಕ & ಪ್ರೌಢ ಶಿಕ್ಷಣ) ಪ್ರಧಾನ ಕಾರ್ಯದರ್ಶಿಯವರಿಗೆ ಸೂಚನೆಯನ್ನು ನೀಡಲಾಗಿದ್ದು, ಈವರೆಗೂ ಯಾವುದೇ ಅಧಿಕಾರಿಯನ್ನು ನಿಯೋಜಿಸದಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ, ಕೂಡಲೇ ಒಬ್ಬ ಸೂಕ್ತ ಅಧಿಕಾರಿಯನ್ನು ಗುರುತಿಸಿ ಈ ಹುದ್ದೆಗೆ ನಿಯೋಜಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.

   ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ & ಪ್ರೌಢ ಶಿಕ್ಷಣ) ಹಾಗೂ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.

2. **ಪಠ್ಯಪುಸ್ತಕದಲ್ಲಿ ರಸ್ತೆ ಸುರಕ್ಷತೆಯ ವಿಷಯವನ್ನು ಸೇರ್ಪಡೆಗೊಳಿಸುವ ಕುರಿತು:** ಶಿಕ್ಷಣ ಇಲಾಖೆಯ 1 ರಿಂದ 10 ನೇ ತರಗತಿಗಳ ಪಠ್ಯಪುಸ್ತಕದಲ್ಲಿ ರಸ್ತೆ ಸುರಕ್ಷತೆಯ ವಿಷಯವನ್ನು ಸೇರ್ಪಡೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಈ ಬಗ್ಗೆ ಈಗಾಗಲೇ ಕೈಗೊಂಡಿರುವ ಕ್ರಮದ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಅಧ್ಯಕ್ಷರು ಸೂಚಿಸಿದರು. ಕ್ರಮ: ಶಿಕ್ಷಣ ಇಲಾಖೆ (ಪ್ರಾಥಮಿಕ & ಪ್ರೌಢಶಿಕ್ಷಣ), DSERT

3. **ಸಾರ್ವಜನಿಕ ಶಿಕ್ಷಣ ಇಲಾಖೆಯು ರೂಪಿಸಿರುವ SOP ಅನ್ನು ಜಾರಿಗೊಳಿಸುವ ಕುರಿತು:**
   ಮುಂದಿನ ದಿನಗಳಲ್ಲಿ ಶಾಲೆಗಳು ಪ್ರಾರಂಭವಾದ ನಂತರ ಮಕ್ಕಳ ಹಾಗೂ ವಿದ್ಯಾರ್ಥಿಗಳು ಶಾಲೆಗಳಿಗೆ ಆಗಮಿಸಲು ವಿವಿಧ ಸಂಚಾರಿ ವಿಧಾನಗಳನ್ನು ಅನುಸರಿಸಲಿದ್ದು, ಪ್ರಮುಖವಾಗಿ ಸಾರ್ವಜನಿಕ ಬಸ್ಸುಗಳಲ್ಲಿ, ಆಟೋರಿಕ್ಷಾಗಳಲ್ಲಿ, ಶಾಲಾ ವಾಹನಗಳಲ್ಲಿ, ಇತರೆ ವಾಹನಗಳಲ್ಲಿ ಸಂಚರಿಸಲಿದ್ದು, ಕೋವಿಡ್-19 ಹಿನ್ನೆಲೆಯಲ್ಲಿ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಮಕ್ಕಳು, ವಾಹನ ಮಾಲೀಕರು, ವಾಹನ ಚಾಲಕರು, ಶಾಲೆಗಳ ವ್ಯವಸ್ಥಾಪಕ ಮಂಡಳಿಯವರು ಪಾಲಿಸಬೇಕಾಗಿರುವ ನಿಯಮಗಳ ಕುರಿತು ಶಿಕ್ಷಣ ಇಲಾಖೆಯು ಈಗಾಗಲೇ ಪ್ರಮಾಣೀಕೃತ ಕಾರ್ಯವಿಧಾನ ಪ್ರಕ್ರಿಯೆ (SOP) ಅನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಸಿದ್ದಪಡಿಸಲಾಗಿರುತ್ತದೆ. ಸದರಿ SOP ಅನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ರವರ ಮುಖೇನ ಹೊರಡಿಸಿದಲ್ಲಿ, ಸದರಿ SOP ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಹಾಯವಾಗುವುದೆಂದು ಮನವಿಮಾಡಿದರು. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.
   ಕ್ರಮ: ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ.

**4. ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾರ್ಯಗಳು:**

4.1 ರಾಜ್ಯದಲ್ಲಿ ಗುರುತಿಸಲಾಗಿರುವ ಒಟ್ಟು 942 ಕಪ್ಪುಚುಕ್ಕೆ ಸ್ಥಳಗಳ ಪೈಕಿ 286 ಕಪ್ಪುಚುಕ್ಕೆ ಸ್ಥಳಗಳನ್ನು ಸರಿಪಡಿಸಲಾಗಿದ್ದು, 319 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾರ್ಯವು ಪ್ರಗತಿಯಲ್ಲಿರುತ್ತದೆ ಹಾಗೂ 31 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. ಬಾಕಿ 306 ಕಪ್ಪುಚುಕ್ಕೆ ಸ್ಥಳಗಳನ್ನು ಸರಿಪಡಿಸಬೇಕಾಗಿರುತ್ತದೆ. ಬಾಕಿಯಿರುವ 306 ಕಪ್ಪುಚುಕ್ಕೆ ಸ್ಥಳಗಳ ಪಟ್ಟಿಯನ್ನು ಪರಿಶೀಲಿಸಿದಾಗ 04 ಕಪ್ಪುಚುಕ್ಕೆ ಸ್ಥಳಗಳು ಪುನಾರಾವರ್ತನೆಯಾಗಿರುವುದನ್ನು ಗಮನಿಸಿ ಅವುಗಳನ್ನು ಕೈಬಿಡಲಾಗಿದ್ದು, ಪ್ರಸ್ತುತ 302 ಕಪ್ಪುಚುಕ್ಕೆ ಸ್ಥಳಗಳು ಬಾಕಿಯಿರುತ್ತದೆ. ಲೋಕೋಪಯೋಗಿ ಇಲಾಖೆಯ ವತಿಯಿಂದ ಒಟ್ಟಾರೆಯಾಗಿ ಬಾಕಿಯಿರುವ ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾರ್ಯಗಳಿಗಾಗಿ ಅಂದಾಜು ರೂ.43.00 ಕೋಟಿಗಳ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ಈ ಹೆಚ್ಚುವರಿ ಅನುದಾನದ ಬಿಡುಗಡೆಗಾಗಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿದ್ದು, ಅವರು ಸದರಿ ಅನುದಾನವನ್ನು ಬಿಡುಗಡೆ ಮಾಡಲು ಒಪ್ಪಿರುತ್ತಾರೆ ಎಂಬ ಅಂಶವನ್ನು ಅಧ್ಯಕ್ಷರ ಗಮನಕ್ಕೆ ತರಲಾಯಿತು.

4.2 ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ ಒಟ್ಟಾರೆ ಬಾಕಿಯಿರುವ 89 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾರ್ಯಕ್ಕೆ ಅಗತ್ಯವಿರುವ ಅನುದಾನ ಬಿಡುಗಡೆಗಾಗಿ ಈಗಾಗಲೇ ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ರವರ ಮುಖೇನ ಅನುದಾನದ ಬಿಡುಗಡೆಗಾಗಿ ಪತ್ರ ವ್ಯವಹಾರವನ್ನು ನಡೆಸಲಾಗಿದ್ದು, ಸದರಿ ಅನುದಾನವನ್ನು ನಿರೀಕ್ಷಿಸಲಾಗುತ್ತಿದೆ.

4.3 ರಾಜ್ಯದಲ್ಲಿ ಈಗಾಗಲೇ ಗುರುತಿಸಲ್ಪಟ್ಟಿರುವ ಒಟ್ಟು 942 ಕಪ್ಪುಚುಕ್ಕೆ ಸ್ಥಳಗಳ ಪೈಕಿ 436 ಕಪ್ಪುಚುಕ್ಕೆ ಸ್ಥಳಗಳು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ದ ವ್ಯಾಪ್ತಿಗೊಳಪಡುತ್ತಿದ್ದು, ಅವುಗಳಲ್ಲಿ 296 ಕಪ್ಪುಚುಕ್ಕೆ ಸ್ಥಳಗಳಿಗೆ MoRTH ವತಿಯಿಂದ (Blackspot Id Numbers) ಗುರುತಿನ ಸಂಖ್ಯೆಗಳನ್ನು ನೀಡಲಾಗಿರುತ್ತದೆ. ಉಳಿಕೆ 140 ಕಪ್ಪುಚುಕ್ಕೆ ಸ್ಥಳಗಳಿಗೆ MoRTH ವತಿಯಿಂದ ಗುರುತಿನ ಸಂಖ್ಯೆಗಳನ್ನು ನೀಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ 436 ಕಪ್ಪುಚುಕ್ಕೆ ಸ್ಥಳಗಳ ಪೈಕಿ ಒಟ್ಟಾರೆ 133 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಅವುಗಳನ್ನು ಶೀಘ್ರವಾಗಿ ಸರಿಪಡಿಸುವ ಕಾರ್ಯವನ್ನು ಪೂರ್ಣಗೊಳಿಸುವುದಾಗಿ ಪ್ರಾಂತೀಯ ಅಧಿಕಾರಿ, ಭಾ.ರಾ.ಹೆ.ಪ್ರಾಧಿಕಾರ, ರವರು ತಿಳಿಸಿದರು. 140 ಕಪ್ಪುಚುಕ್ಕೆ ಸ್ಥಳಗಳ ಸಮೀಕ್ಷೆಯನ್ನು ನಡೆಸಲಾಗುತ್ತಿದೆ ಹಾಗೂ ಅವುಗಳಲ್ಲಿ ಕೈಗೊಳ್ಳಬೇಕಾಗಿರುವ ಸುರಕ್ಷತಾ ಕ್ರಮಗಳ ಕುರಿತಂತೆ ಪ್ರಸ್ತಾವನೆಯನ್ನು ಸಲ್ಲಿಸಲು ಯೋಜನಾ ಅನುಷ್ಠಾನ ಘಟಕದ ಮುಖ್ಯಸ್ಥರಿಗೆ ಸೂಚನೆಯನ್ನು ನೀಡಲಾಗಿದೆ. ಈ ಸಂಬಂಧ ಅಗತ್ಯವಿರುವ ಅನುದಾನದ ಬಿಡುಗಡೆಗಾಗಿ MoRTH ಕಾರ್ಯದರ್ಶಿಯವರಿಗೆ ಪ್ರಸ್ತಾವನೆಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಸಲ್ಲಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಈ ಬಗ್ಗೆ ಸಮನ್ವಯವನ್ನು ಸಾಧಿಸಲು ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರಿಗೆ ಸೂಚನೆ ನೀಡಲಾಯಿತು.

ಕ್ರಮ: RO - NHAI, ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.

4.4 ಮೈಸೂರು ವಿಭಾಗದಲ್ಲಿ ಗುರುತಿಸಲಾಗಿರುವ 10 ಕಪ್ಪುಚುಕ್ಕೆ ಸ್ಥಳಗಳು ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಗೆ ಒಳಪಡುತ್ತಿದ್ದು, ಅವುಗಳನ್ನು ಸರಿಪಡಿಸುವ ಕಾಮಗಾರಿಗಳನ್ನು ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳುತ್ತಿರುವ ವಿಷಯವನ್ನು ಅಧ್ಯಕ್ಷರ ಗಮನಕ್ಕೆ ತರಲಾಯಿತು.

ಕ್ರಮ: ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.

4.5 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 29 ಕಪ್ಪುಚುಕ್ಕೆ ಸ್ಥಳಗಳನ್ನು ಗುರಿತಿಸಲಾಗಿದ್ದು, ಅವುಗಳ ಪೈಕಿ 11 ಕಪ್ಪುಚುಕ್ಕೆ ಸ್ಥಳಗಳನ್ನು ಈಗಾಗಲೇ ಸರಿಪಡಿಸಲಾಗಿರುತ್ತದೆ. ಉಳಿಕೆ 10 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾರ್ಯಗಳಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಹಾಗೂ ಇನ್ನುಳಿದ 8 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾಮಗಾರಿಗಳಿಗೆ DPR ಗಳನ್ನು ಸಿದ್ದಪಡಿಸುತ್ತಿರುವುದಾಗಿ ಮುಖ್ಯ ಅಭಿಯಂತರರು, ರಸ್ತೆ ಮೂಲಸೌಲಭ್ಯ, ಬಿಬಿಎಂಪಿ ರವರು ತಿಳಿಸಿದರು. ಸದರಿ 8 ಕಪ್ಪಚುಕ್ಕೆ ಸ್ಥಳಗಳಿಗೆ 15 ದಿನಗಳ ಅಲ್ಪಕಾಲಾವಧಿ ಟೆಂಡರ್ ಪ್ರಕ್ರಿಯೆಯ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

ಕ್ರಮ: ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**5. ಕಪ್ಪುಚುಕ್ಕೆ ಸ್ಥಳಗಳ ಅಧ್ಯಯನ ಕುರಿತು:**

5.1 ಸ್ವೀಕರಿಸಲಾದ ಕಪ್ಪುಚುಕ್ಕೆ ಸ್ಥಳಗಳ ವೈಜ್ಞಾನಿಕ ಅಧ್ಯಯನ ವರದಿಗಳನ್ನು ದಿ:04-09-2020 ರಂದು ಆಯಾ ನಿರ್ವಹಣಾ ಪ್ರಾಧಿಕಾರಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

5.2 ದಿ:07-08-2020 ರಂದು ನಾಲ್ಕು ವಲಯಗಳ ಮುಖ್ಯ ಇಂಜಿನಿಯರುಗಳಿಗೆ ಅವರ ವ್ಯಾಪ್ತಿಯಲ್ಲಿ ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆಗೆ ಮುಂಚೆ ಘಟಿಸಿರುವ 3 ವರ್ಷಗಳ ಅಪಘಾತದ ವಿವರ ಮತ್ತು ಸರಿಪಡಿಸಲಾದ ಕಪ್ಪುಚುಕ್ಕೆ ಸ್ಥಳಗಳ ಅನುಷ್ಠಾನೋತ್ತರ ಅಧ್ಯಯನ ವರದಿಯನ್ನು ಸಲ್ಲಿಸುವಂತೆ ಸೂಚಿಸಿ ಪತ್ರ ಬರೆಯಲಾಗಿದೆ. ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಕಾಮಗಾರಿ ನಿರ್ವಹಿಸುತ್ತಿರುವ ಸಮಾಲೋಚಕರಿಂದಲೂ ಕಪ್ಪುಚುಕ್ಕೆ ಸ್ಥಳಗಳ ಅನುಷ್ಠಾನೋತ್ತರ ಅಧ್ಯಯನವನ್ನು ನಡೆಸಲಾಗುವುದು.

5.3 ಪ್ರಾರಂಭಿಕವಾಗಿ 2017-18ನೇ ಸಾಲಿನ ರಸ್ತೆ ಸುರಕ್ಷತಾ ಕಾಮಗಾರಿಗಳಲ್ಲಿ ಸರಿಪಡಿಸಲಾದ ಕೆಲವು ಕಾಮಗಾರಿಗಳ ಅನುಷ್ಠಾನೋತ್ತರ ಅಧ್ಯಯನವನ್ನು ನಡೆಸಲಾಗಿದ್ದು, ಕೆಲವು ವರದಿಗಳು ಸ್ವೀಕೃತಗೊಂಡಿರುತ್ತದೆ. ರಸ್ತೆ ಬಳಕೆದಾರರು ಹಾಗೂ ಸ್ಥಳೀಯರ ಅಭಿಪ್ರಾಯ ಪಡೆಯಲಾಗಿದ್ದು, ಎಲ್ಲರೂ ತೃಪ್ತಿಕರವಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದು ಕೆಲವರು ಕೆಲವು ಸ್ಥಳಗಳಲ್ಲಿ ಜಂಕ್ಷನ್‌ಗಳನ್ನು ಕಾಲಕಾಲಕ್ಕೆ ನಿರ್ವಹಣೆ ಮಾಡುವ ಬಗ್ಗೆ ಸಲಹೆಗಳನ್ನು ನೀಡಿರುತ್ತಾರೆ. ಸದರಿ ಸಲಹೆಗಳನ್ವಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಈಗಾಗಲೇ ಸಂಬಂಧಿಸಿದ ಅಭಿಯಂತರರುಗಳಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಕ್ರಮ: ಲೋಕೋಪಯೋಗಿ ಇಲಾಖೆ, PRAMC

**6. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗೊಂಡಿರುವ ಕಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾಮಗಾರಿಗಳ ಕುರಿತು:**

ಪ್ರಧಾನ ಇಂಜಿನಿಯರ್PRAMC ರವರ ಪತ್ರ ದಿ:07-07-2020 ರಲ್ಲಿ ಎಸ್.ಪಿ. ಚಿಕ್ಕಮಗಳೂರು ಜಿಲ್ಲೆ ರವರು ಸಲ್ಲಿಸಿರುವ ಒಟ್ಟು 39 ಕಪ್ಪುಚುಕ್ಕೆ ಸ್ಥಳಗಳ ಬದಲು ಲೋಕೋಪಯೋಗಿ ಇಲಾಖೆಯವರು 22 ಕಪ್ಪುಚುಕ್ಕೆ ಸ್ಥಳಗಳನ್ನು ಸರಿಪಡಿಸಿರುತ್ತಾರೆ. ಆದ್ದರಿಂದ ಗುರುತಿಸಿ ಕಳುಹಿಸಲಾದ ಕಪ್ಪುಚುಕ್ಕೆ ಸ್ಥಳಗಳಿಗೆ ಹೊಂದಾಣಿಕೆ ಯಾಗಿರುವುದಿಲ್ಲ ಎಂಬ ವಿಷಯವನ್ನು ಎಡಿಜಿಪಿ & ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ ರವರು ಅಧ್ಯಕ್ಷರ ಗಮನಕ್ಕೆ ತಂದರು. ಈ ವಿಷಯವನ್ನು ಅಧ್ಯಕ್ಷರು ಗಂಭೀರವಾಗಿ ಪರಿಗಣಿಸಿ ಅನುದಾನದ ದುರ್ಬಳಕೆ ಕಂಡು ಬರುತ್ತಿರುವ ಕಾರಣ ಪ್ರಕರಣವನ್ನು ಪರಿಶೀಲಿಸಿ ವರದಿಯನ್ನು ನೀಡುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ರವರಿಗೆ ಅಧ್ಯಕ್ಷರು ಸೂಚಿಸಿದರು.

ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ

**7. ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾರ್ಯಗಳ ಮರುಪರಿಶೀಲನೆ:**

ಲೋಕೋಪಯೋಗಿ ಇಲಾಖೆ, ಎನ್.ಹೆಚ್.ಎ.ಐ, ಇತರೆ ರಸ್ತೆ ನಿರ್ವಹಣಾ ಪ್ರಾಧಿಕಾರಗಳು ರಾಜ್ಯದಲ್ಲಿ ಈಗಾಗಲೇ ಸರಿಪಡಿಸಿರುವ ಕಪ್ಪುಚುಕ್ಕೆ ಸ್ಥಳಗಳ ವಿವರಗಳನ್ನು ಪೊಲೀಸ್ ಇಲಾಖೆಗೆ ನೀಡುವುದು. ಪೊಲೀಸ್ ಇಲಾಖೆಯು ಆಯಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮುಖೇನ ಸದರಿ ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಕೈಗೊಂಡಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಮನ್ವಯವನ್ನು ಸಾಧಿಸಿಕೊಂಡು ಮೌಲ್ಯಮಾಪನ ಮಾಡಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡಲು ಅಧ್ಯಕ್ಷರು ಸೂಚಿಸಿದರು.

ಕ್ರಮ: ಎಲ್ಲಾ ರಸ್ತೆ ನಿರ್ವಹಣಾ ಪ್ರಾಧಿಕಾರಗಳು, ಎಡಿಜಿಪಿ & ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ

**8. MoRTH ವತಿಯಿಂದ ರಾಜ್ಯದಲ್ಲಿ ಗುರುತಿಸಲ್ಪಟ್ಟಿರುವ ಕಪ್ಪುಚುಕ್ಕೆ ಸ್ಥಳಗಳು:**

2015 ನೇ ಸಾಲಿನಿಂದ 2018 ರವರೆಗಿನ ಅವಧಿಯಲ್ಲಿ MoRTH ವತಿಯಿಂದ ರಾಜ್ಯದಲ್ಲಿ ಗುರುತಿಸಲ್ಪಟ್ಟಿರುವ ಕಪ್ಪುಚುಕ್ಕೆ ಸ್ಥಳಗಳ ಪೈಕಿ NHAI ವ್ಯಾಪ್ತಿ ಹೊರತಾಗಿ ಇತರೆ ರಸ್ತೆ ನಿರ್ವಹಣಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಡುವ ಕಪ್ಪುಚುಕ್ಕೆ ಸ್ಥಳಗಳ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರಿಗೆ ದಿ:11-08-2020 ರ ಪತ್ರದಲ್ಲಿ ನೀಡಿರುವುದಾಗಿ NHAI ಪ್ರಾಂತೀಯ ಅಧಿಕಾರಿ ರವರು ಸಭೆಯ ಗಮನಕ್ಕೆ ತಂದರು. ಸದರಿ ಪಟ್ಟಿಯನ್ನು ಪರಿಶೀಲಿಸಿ ಅವುಗಳ ಸರಿಪಡಿಸುವಿಕೆಗಾಗಿ ಅಗತ್ಯ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

ಕ್ರಮ: ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇತರೆ ಸಂಬಂಧಿಸಿದ ರಸ್ತೆ ನಿರ್ವಹಣಾ ಪ್ರಾಧಿಕಾರಗಳು.

**9. Bloomberg Philanthropies Global Road Safety Initiative (BIGRS) in Bengaluru City:**

ಬೆಂಗಳೂರು ನಗರದಲ್ಲಿ BIGRS ರವರು ಕಾರ್ಯಾರಂಭ ಮಾಡುವ ಮುನ್ನ ಭಾಗವಹಿಸುವಿಕೆ ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿದ್ದು, ಸದರಿ ಒಪ್ಪಂದಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ರವರು ಒಪ್ಪಂದಕ್ಕೆ ಸಹಿ ಹಾಕುವ ಬಗ್ಗೆ ಈಗಗಾಲೇ BIGRS ಹಾಗೂ ಇತರೆ ಪಾಲುದಾರಿಕೆ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಅಭಿಪ್ರಾಯಪಡಲಾಗಿರುತ್ತದೆ. ಸದರಿ ಒಪ್ಪಂದಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ರವರು ಸಹಿ ಹಾಕಲು ಅಧ್ಯಕ್ಷರು ಒಪ್ಪಿಗೆಯನ್ನು ನೀಡಿದರು.

ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ

**10. Integrated Road Accident Database Management (iRAD):**

IIT Madras, Chennai ಹಾಗೂ NICs ರವರ ತಾಂತ್ರಿಕ ಸಹಯೋಗದೊಂದಿಗೆ iRAD ವ್ಯವಸ್ಥೆಯನ್ನುಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಪ್ರಕ್ರಿಯೆಯು ಪ್ರಾಯೋಗಿಕ ಹಂತದಲ್ಲಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ರವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿ, ಸಮಿತಿಯ ಸಭೆಗಳನ್ನು ನಡೆಸಲಾಗುತ್ತಿದೆ. ಪೈಲಟ್ ಆಧಾರದಲ್ಲಿ ತುಮಕೂರು, ಮಂಡ್ಯ, ಬೆಳಗಾವಿ, ಬೀದರ್ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು, ಆಯಾ ಜಿಲ್ಲೆಗಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಜಿಲ್ಲಾ ಮಟ್ಟದ ಸಮನ್ವಯ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಸದರಿ ಜಿಲ್ಲೆಗಳ ಪೊಲೀಸ್, ಸಾರಿಗೆ, ಲೋಕೋಪಯೋಗಿ, ಆರೋಗ್ಯ ಇಲಾಖೆಗಳ

ಸಿಬ್ಬಂದಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಒಂದು ದಿನದ ಕಾರ್ಯಾಗಾರವನ್ನು ಕೈಗೊಂಡು iRAD ವ್ಯವಸ್ಥೆಯಡಿ ರೂಪಿಸಿರುವ ತಂತ್ರಜ್ಞಾನದ (alpha version) ಬಗ್ಗೆ ತರಬೇತಿಯನ್ನು ನೀಡಲಾಗಿದೆ ಹಾಗೂ ಸದರಿ ತಂತ್ರಜ್ಞಾನದ ಬಗ್ಗೆ ಸಾಧಕ ಭಾದಕಗಳ ಬಗ್ಗೆ ಮರು ಮಾಹಿತಿಯನ್ನು ಕಲೆಹಾಕಿ IIT-Madras, NICS ರವರಿಗೆ ನೀಡಲಾಗುವುದು. ಸದರಿ ಮಾಹಿತಿಯ ಆಧಾರದ ಮೇರೆಗೆ ಸದರಿ ತಂತ್ರಜ್ಞಾನವನ್ನು (beta version) ಡಿಸೆಂಬರ್ 2020 ರ ವೇಳೆಗೆ ಅಂತಿಮಗೊಳಿಸಲಾಗುವುದು ಎಂಬ ಮಾಹಿತಿಯನ್ನು ಅಧ್ಯಕ್ಷರ ಗಮನಕ್ಕೆ ತರಲಾಯಿತು.

ಕ್ರಮ: iRAD ಅನುಷ್ಠಾನ ಸಮಿತಿ

**11.ವಾಹನ ಚಾಲನಾ ಅನುಜ್ಞಾಪತ್ರ ನವೀಕರಣ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನೀಡುವಿಕೆ ಪ್ರಕ್ರಿಯೆಯನ್ನು ಜಾರಿಗೊಳಿಸುವ ಕುರಿತು:**

ಈ ಸಂಬಂಧ proto type model ಅನ್ನು ಸಿದ್ದಪಡಿಸಲಾಗಿದ್ದು, ಶೀಘ್ರದಲ್ಲಿ ಸಂಬಂಧಿಸಿದ ಐಟಿ ತಂತ್ರಜ್ಞರೊಂದಿಗೆ ಸಮಾಲೋಚಿಸಿ ಪ್ರಕ್ರಿಯೆಯನ್ನು ಜಾರಿಗೊಳಿಸುವುದಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ರವರು ಅಧ್ಯಕ್ಷರ ಗಮನಕ್ಕೆ ತಂದರು.

ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ

**12.2020-21ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು:**

12.1 ರಸ್ತೆ ಸುರಕ್ಷತಾ ಚಟುವಟಿಕೆಗಳಿಗಾಗಿ 2020-21ನೇ ಸಾಲಿಗೆ ಬಿಡುಗಡೆಗೊಳಿಸಿರುವ ರೂ.200 ಕೋಟಿಗಳ ಪೈಕಿ ರೂ.100 ಕೋಟಿಗಳನ್ನು ಕ.ರಾ.ರ.ಸು.ಪ್ರಾಧಿಕಾರಕ್ಕೆ ಬಿಡುಗಡೆಗೊಳಿಸಿ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿರುತ್ತದೆ. ಸದರಿ ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.

ಕ್ರಮ: ಆಯುಕ್ತರು, ಸಾರಿಗೆ & ರಸ್ತೆ ಸುರಕ್ಷತೆ, ಮತ್ತು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

12.2 ಪೊಲೀಸ್ ಇಲಾಖೆಗೆ ರೂ.100 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ರೂ.65 ಕೋಟಿಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ. ಪೊಲೀಸ್ ಇಲಾಖೆಯು ಹೆಚ್ಚುವರಿಯಾಗಿ ಸಲ್ಲಿಸಿರುವ ರೂ.35 ಕೋಟಿಗಳ ಕ್ರಿಯಾ ಯೋಜನೆಯನ್ನು ಅಧ್ಯಕ್ಷರು ಸಭೆಯಲ್ಲಿ ಅನುಮೋದಿಸಿದರು. ಅನುಮೋದಿತ ಕ್ರಿಯಾ ಯೋಜನೆಯ ರೀತ್ಯಾ ಕಾಮಗಾರಿಗಳನ್ನು ಪ್ರಾರಂಭಿಸಲು ಸಂಬಂಧಿಸಿದ ಸಚಿವಾಲಯಗಳು ಆಡಳಿತಾತ್ಮಕ ಅನುಮೋದನೆಯನ್ನು ಶೀಘ್ರವಾಗಿ ನೀಡುವುದು. ತದನಂತರ ಕಾಮಗಾರಿಗಳ ಪ್ರಗತಿಯ ಆಧಾರದ ಮೇರೆಗೆ ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವುದು ಹಾಗೂ ವರ್ಷಾಂತ್ಯದಲ್ಲಿ ಕ್ರಿಯಾ ಯೋಜನೆ ರೀತ್ಯಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಒಳಾಡಳಿತ ಹಾಗೂ ಸಾರಿಗೆ ಇಲಾಖೆಗಳಿಗೆ ಅಧ್ಯಕ್ಷರು ಸೂಚಿಸಿದರು.

ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ - ಒಳಾಡಳಿತ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ - ಸಾರಿಗೆ ಇಲಾಖೆ, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ ಆಯುಕ್ತರು

**13.ಪ್ರವರ್ತನ ಚಟುವಟಿಕೆಗಳ ಪ್ರಗತಿ:**

13.1 ಸಾರಿಗೆ ಹಾಗೂ ಪೊಲೀಸ್ ಇಲಾಖೆಗಳು ಆಗಸ್ಟ 2020 ರ ಮಾಹೆಯಲ್ಲಿ ಪ್ರವರ್ತನ ಚಟುವಟಿಕೆಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಿ ಅಧ್ಯಕ್ಷರು ಮೆಚ್ಚುಗೆಯನ್ನು

ವ್ಯಕ್ತಪಡಿಸಿದರು. ಇದೇ ರೀತಿಯಾಗಿ ಮುಂದಿನ ದಿನಗಳಲ್ಲಿ ಪ್ರವರ್ತನ ಕಾರ್ಯಗಳನ್ನು ನಡೆಸಲು ಅಧ್ಯಕ್ಷರು ಸೂಚಿಸಿದರು.

13.2 ಹಲವು ಜಿಲ್ಲೆಗಳಲ್ಲಿ ಪ್ರವರ್ತನ ಚಟುವಟಿಕೆಗಳು ಕುಂಠಿತವಾಗಿರುವುದನ್ನು ಗಮನಿಸಿ ಅಂತಹ ಜಿಲ್ಲೆಗಳಲ್ಲಿ ಪ್ರವರ್ತನ ಚಟುವಟಿಕೆಗಳನ್ನು ಬಲಪಡಿಸಲು ಅಧ್ಯಕ್ಷರು ಸೂಚಿಸಿದರು.

ಕ್ರಮ: ಆಯುಕ್ತರು - ಸಾರಿಗೆ & ರಸ್ತೆ ಸುರಕ್ಷತೆ, ಆಯುಕ್ತರು - ಸಂಚಾರ & ರಸ್ತೆ ಸುರಕ್ಷತೆ

**14. ಕಲಿಕಾ ಚಾಲನಾ ಅನುಜ್ಞಾಪತ್ರ ನೀಡುವ ಪ್ರಕ್ರಿಯೆಯಲ್ಲಿ ಸುಧಾರಣೆ ಮಾಡುವ ಕುರಿತು:**

ಈ ಸಂಬಂಧ ನೀಡಲಾಗಿರುವ ಶಿಫಾರಸ್ಸುಗಳನ್ನು ಜಾರಿ ಮಾಡುವ ಸಲುವಾಗಿ NICS ರವರೊಂದಿಗೆ ಸಮಾಲೋಚನೆ ನಡೆಸಲಾಗಿರುತ್ತದೆ. ಪರೀಕ್ಷೆಯಲ್ಲಿ ನಿಗಧಿಪಡಿಸಿರುವ 15 ಪ್ರಶ್ನೆಗಳನ್ನು 30 ಪ್ರಶ್ನೆಗಳಿಗೆ ಹೆಚ್ಚಿಸಲಾಗುತ್ತಿದೆ ಹಾಗೂ ಅಭ್ಯರ್ಥಿಗಳು ಕನ್ನಡ ಮಾಧ್ಯಮದಲ್ಲಿಯೂ ಸಹ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಅಧ್ಯಕ್ಷರ ಗಮನಕ್ಕೆ ತರಲಾಯಿತು.

**15. ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿಗಳು ಸಭೆಗಳನ್ನು ನಡೆಸದಿರುವ ಬಗ್ಗೆ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ರವರು ಸಭೆಗಳನ್ನು ನಡೆಸುವಂತೆ ಸೂಚಿಸಿ ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅರೆ ಸರ್ಕಾರಿ ಪತ್ರಗಳನ್ನು ಬರೆದಿರುತ್ತಾರೆ. ನಿಗಧಿತ ಸಮಯಗಳಲ್ಲಿ ಸಭೆಗಳನ್ನು ನಡೆಸದೇ ಇರುವ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿಗಳ ಸದಸ್ಯ ಕಾರ್ಯದರ್ಶಿಗಳಾದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡಿ, ಸಭೆಗಳನ್ನು ನಡೆಸಲು ಸೂಕ್ತ ಕ್ರಮವಹಿಸದಿರುವ ಬಗ್ಗೆ ಸಮಂಜಸವಾದ ವಿವರಣೆಯನ್ನು ಪಡೆಯುವಂತೆ ಅಧ್ಯಕ್ಷರು ಸೂಚಿಸಿದರು.

ಕ್ರಮ: ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಕ.ರಾ.ರ.ಸು.ಪ್ರಾ.

**16.** <u>**2x2** ಕಿಮಿ ಗ್ರಿಡ್ ವ್ಯವಸ್ಥೆಯಡಿ ಅಂಬ್ಯುಲೆನ್ಸ್‌ಗಳನ್ನು ಮ್ಯಾಪಿಂಗ್ ಮಾಡುವ ಕುರಿತು:</u>

ಈ ವ್ಯವಸ್ಥೆಯಡಿ ತಮಿಳುನಾಡು ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೊಂಡಿರುವ ತುರ್ತುಚಿಕಿತ್ಸಾ ವಿಧಾನವನ್ನು ಅಧ್ಯಯನ ಮಾಡಿ, IIT-Madras ರವರಿಂದ ಸೂಕ್ತ ಮಾರ್ಗದರ್ಶನಗಳನ್ನು ಪಡೆಯುವ ಮೂಲಕ ಕರ್ನಾಟಕ ರಾಜ್ಯದಲ್ಲಿಯೂ ಸಹ ಅಂಬ್ಯುಲೆನ್ಸ್‌ಗಳನ್ನು ಮ್ಯಾಪಿಂಗ್ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಎಡಿಜಿಪಿ & ಆಯುಕ್ತರು, ಸಂಚಾರ & ರಸ್ತೆ ಸುರಕ್ಷತೆ ರವರು ಅಧ್ಯಕ್ಷರ ಗಮನಕ್ಕೆ ತರಲಾಯಿತು. ಈ ವ್ಯವಸ್ಥೆಯನ್ನು ಶೀಘ್ರದಲ್ಲಿ ಜಾರಿಗೆ ತರಲು ಅಧ್ಯಕ್ಷರು ಸೂಚಿಸಿದರು.

ಕ್ರಮ: 2x2 ಕಿಮಿ ಗ್ರಿಡ್ ವ್ಯವಸ್ಥೆ ಸಮಿತಿ.

**17. ರಸ್ತೆ ಅಪಘಾತಕ್ಕೀಡಾಗುವವರನ್ನು ರಕ್ಷಿಸುವ ಸಲುವಾಗಿ ನಗದು ರಹಿತ ಚಿಕಿತ್ಸಾ ಯೋಜನೆಯನ್ನು ಜಾರಿಗೊಳಿಸುವ ಕುರಿತು:**

ಕೇಂದ್ರ ಸರ್ಕಾರದ ಈ ಯೋಜನೆಯು ರಾಷ್ಟ್ರವ್ಯಾಪಿ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯು ಕರಡು ಹಂತದಲ್ಲಿರುತ್ತದೆ. ಈ ಸಂಬಂಧ ರಾಜ್ಯ ಸರ್ಕಾರಗಳ ನಿಲುವು, ಷರಾಗಳನ್ನು ನೀಡುವಂತೆ ಎಲ್ಲಾ ರಾಜ್ಯ ಸರ್ಕಾರಗಳನ್ನು MoRTH ಮಂತ್ರಾಲಯವು ಕೋರಿರುತ್ತಾರೆ. ಈ ಯೋಜನೆಯು ಜಾರಿಗೆ ಬಂದ ನಂತರ ರಾಜ್ಯ ಸರ್ಕಾರದ ವತಿಯಿಂದ

ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ಅಧ್ಯಕ್ಷರ ಗಮನಕ್ಕೆ ತರಲಾಯಿತು. MoRTH ಮಂತ್ರಾಲಯದ ನಿರ್ದೇಶನದಂತೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅಧ್ಯಕ್ಷರು ಸೂಚಿಸಿದರು.

ಕ್ರಮ: ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಇಲಾಖೆ.

**18.ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು:**

18.1 ಪೊಲೀಸ್ ಇಲಾಖೆಯಿಂದ ಪೊಲೀಸ್ ಉಪಾಧೀಕ್ಷಕರು ಹುದ್ದೆಗೆ ಅಧಿಕಾರಿಯ ನಿಯೋಜನೆ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಕಾರ್ಯನಿರ್ವಾಹಕ ಅಭಿಯಂತರರು ಹುದ್ದೆಗೆ ಅಧಿಕಾರಿಯ ನಿಯೋಜನೆಗಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಕ್ಷರು ಸೂಚಿಸಿದರು.

ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಹಾಗೂ ಒಳಾಡಳಿತ ಇಲಾಖೆ

18.2 ಯೋಜನಾ ಅಧಿಕಾರಿ ಹುದ್ದೆಗೆ ಅಧಿಕಾರಿಯನ್ನು ನಿಯೋಜಿಸುವ ಕುರಿತಂತೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಅಧ್ಯಕ್ಷರು ಈಗಾಗಲೇ ದೂರವಾಣಿ ಮುಖೇನ ಸೂಚಿಸಿದ್ದು, ಅವರನ್ನು ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.

ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

18.3 ಹಣಕಾಸು ಅಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಅಧಿಕಾರಿಗಳ ಕೊರತೆಯಿರುವ ಕಾರಣ ಪರಿಣಿತ ನಿವೃತ್ತ ಹಣಕಾಸು ಅಧಿಕಾರಿಯನ್ನು ಸಲಹೆಗಾರರನ್ನಾಗಿ ನೇಮಕಮಾಡಿಕೊಳ್ಳಲು ಅಗತ್ಯ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

ಕ್ರಮ: ಕ.ರಾ.ರ.ಸು.ಪ್ರಾಧಿಕಾರ.

**19.ರಸ್ತೆ ಅಪಘಾತಗಳ ಅಂಕಿ-ಅಂಶಗಳ ಪರಿಶೀಲನೆ:**

ಆಗಸ್ಟ್ 2020 ರ ಮಾಹೆಯಲ್ಲಿ ರಾಜ್ಯದಲ್ಲಿ ರಸ್ತೆ ಅಪಘಾತಗಳಲ್ಲಿ ಮರಣ ಹೊಂದಿದವರ ಸಂಖ್ಯೆಯಲ್ಲಿ ಹೆಚ್ಚಳವಾಗಿರುತ್ತದೆ. ಈ ಬಗ್ಗೆ ಪರಿಶೀಲಿಸುವಂತೆ ಅಧ್ಯಕ್ಷರು ಸೂಚಿಸಿದರು.

ಕ್ರಮ: ಎಡಿಜಿಪಿ ಮತ್ತು ಆಯುಕ್ತರು, ಸಂಚಾರ & ರಸ್ತೆ ಸುರಕ್ಷತೆ.

**20.**ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ತ.ಮ. ವಿಜಯ್‌ಭಾಸ್ಕರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ,
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.

ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು:

1. ಶ್ರೀ ತ.ಮ. ವಿಜಯ ಭಾಸ್ಕರ್, ಭಾ.ಆ.ಸೇ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಧ್ಯಕ್ಷತೆ
2. ಡಾ| ರಜನೀಶ್ ಗೋಯಲ್, ಭಾ.ಆ.ಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಮತ್ತು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ಪದನಿಮಿತ್ತ ಸದಸ್ಯರು – ಕರಾರಸುಪ್ರಾ.
3. ಶ್ರೀ ಅಂಜುಮ್ ಪರ್ವೇಜ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಹಾಗೂ ಉಪಾಧ್ಯಕ್ಷರು – ಕರಾರಸುಪ್ರಾ.
4. ಶ್ರೀ ಎನ್. ಶಿವಕುಮಾರ್, ಭಾ.ಪೊ.ಸೇ, ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹಾಗೂ ಆಯುಕ್ತರು, ಕರಾರಸುಪ್ರಾ.
5. ಶ್ರೀ ಪ್ರತಾಪ್‌ರೆಡ್ಡಿ, ಭಾ.ಪೊ.ಸೇ, ಆರಕ್ಷಕ ಹೆಚ್ಚುವರಿ ಮಹಾನಿರ್ದೇಶಕರು & ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ, ಪೊಲೀಸ್ ಇಲಾಖೆ.
6. ಶ್ರೀ ಜಗದೀಶ್, ಭಾ.ಆ.ಸೇ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಶ್ರೀ ಎಲ್. ನರೇಂದ್ರ ಹೋಳ್ಕರ್, ಅಪರ ಆಯುಕ್ತರು, ಕರಾರಸುಪ್ರಾ ಹಾಗೂ ಸದಸ್ಯ ಕಾರ್ಯದರ್ಶಿ, ಕರಾರಸಪ್ರಾ
8. ಶ್ರೀ ಸೂರ್ಯವಂಶಿ, ರೀಜನಲ್ ಆಫೀಸರ್, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI), ಬೆಂಗಳೂರು
9. ಶ್ರೀ ಪುರಷೋತ್ತಮ್ ಸಿಂಗ್ ಬಿ.ಹೆಚ್, ವಿಶೇಷಾಧಿಕಾರಿ (ಜಿಲ್ಲಾ ಪಂಚಾಯತ್), ಆರ್ಥಿಕ ಇಲಾಖೆ, ರವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ರವರ ಪ್ರತಿನಿಧಿಯಾಗಿ ಭಾಗವಹಿಸಿರುತ್ತಾರೆ.
10. ಶ್ರೀ ಗುರುಪ್ರಸಾದ್, ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
11. ಶ್ರೀ ಎನ್.ಎಸ್. ರಮೇಶ, ಪ್ರಧಾನ ಅಭಿಯಂತರರು, ಯೋಜನೆ ಮತ್ತು ರಸ್ತೆ ಆಸ್ತಿ ನಿರ್ವಹಣಾ ಕೇಂದ್ರ (PRAMC), ಲೋಕೋಪಯೋಗಿ ಇಲಾಖೆ
12. ಡಾ| ಎಂ. ಸೆಲ್ವರಾಜನ್, ಉಪ ನಿರ್ದೇಶಕರು (ವೈದ್ಯಕೀಯ-1), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸದಸ್ಯರು-ಕರಾರಸುಪ್ರಾ ರವರ ಪ್ರತಿನಿಧಿಯಾಗಿ ಭಾಗವಹಿಸಿರುತ್ತಾರೆ.
13. ಶ್ರೀಮತಿ ಟಿ.ಎನ್. ಗಾಯತ್ರಿದೇವಿ, ಸಹ ನಿರ್ದೇಶಕರು, ಡಿಎಸ್‌ಇಆರ್‌ಟಿ, ಶಿಕ್ಷಣ ಇಲಾಖೆ, ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ಪದನಿಮಿತ್ತ ಸದಸ್ಯರು-ಕರಾರಸುಪ್ರಾ ರವರ ಪ್ರತಿನಿಧಿಯಾಗಿ ಭಾಗವಹಿಸಿರುತ್ತಾರೆ.